**ಅಸಲು ದಾವಾ ಸಂಖ್ಯೆ: 1186/2025**
**ಪಿಡಬ್ಲೂ -1**

**ದಿಃ 02-04-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. BBS ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ವಾದಿಯ ಜನನ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು,

ವಾದಿಯ ವ್ಯಾಸಂಗ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-2 ಮತ್ತು 3 ಎಂದು,

ವಾದಿಯ ಶಾಲಾ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-4 ಎಂದು,

6ನೇ ಪ್ರತಿವಾದಿ ನೀಡಿದ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-5 ಎಂದು,

ನನ್ನ ಆಧಾರ ಕಾರ್ಡ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-6 ಎಂದು,

ನನ್ನ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-7 ಎಂದು, ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಮಾನ್ಯ ಡಿ.ಜಿ.ಪಿ ರವರಿಂದಃ-**

1. ವಾದಿ ನನ್ನ ಮಗಳು ಆಗಿರುತ್ತಾಳೆ. ವಾದಿಯಾದ ಐಮನ್ 1ನೇ ತರಗತಿ ಹಾಗೂ 2ನೇ ತರಗತಿವರೆಗೆ 5ನೇ ಪ್ರತಿವಾದಿ ಶಾಲೆಯಲ್ಲಿ ಓದಿರುತ್ತಾಳೆ. ನಂತರ 3 ನೇ ತರಗತಿಯಿಂದ 8ನೇ ತರಗತಿವರೆಗೆ 6ನೇ ಪ್ರತಿವಾದಿ ಶಾಲೆಯಲ್ಲಿ ಓದಿರುತ್ತಾಳೆ. 9ನೇ ತರಗತಿಯನ್ನು 7ನೇ ಪ್ರತಿವಾದಿ

ಶಾಲೆಯಲ್ಲಿ ಓದಿರುತ್ತಾಳೆ. ಐಮನ್ ಳನ್ನು ಶಾಲೆಗೆ ದಾಖಲು ಮಾಡಲು ನಾನೇ ಹೋಗಿದ್ದೆ. ವಾದಿಯನ್ನು ಶಾಲೆಗೆ ದಾಖಲು ಮಾಡುವ ಸಂದರ್ಭದಲ್ಲಿ ನಾನು ನನ್ನ ಹೆಸರು ನಮೂದು ಮಾಡಿದಂತೆಯೇ ಶಾಲೆಯವರು ಅವರ ದಾಖಲೆಗಳಲ್ಲಿ ನನ್ನ ಹೆಸರು ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರ್ಮಿಯಲ್ಲಿ ಕೆಲಸ ಮಾಡುತ್ತೇನೆ. ನನ್ನ ಸರಿಯಾದ ಹೆಸರು ತೋರಿಸಲು ನನ್ನ ಅಂಕಪಟ್ಟಿ, ಆಧಾರ ಕಾರ್ಡ ಹಾಗೂ ಪ್ಯಾನಕಾರ್ಡ ಹಾಜರಪಡಿಸಿರುತ್ತೇನೆ. ವಾದಿಯ ಶಾಲಾ ದಾಖಲಾತಿಗಳಲ್ಲಿ ನನ್ನ ಹೆಸರು ತಪ್ಪಾಗಿ ನಮೂದು ಆಗಿರುವುದು ನನಗೆ ವಾದಿಯನ್ನು 5ನೇ ಪ್ರತಿವಾದಿ ಶಾಲೆಯಿಂದ ಬೇರೆ ಶಾಲೆಗೆ ದಾಖಲು ಮಾಡುವ ಸಂದರ್ಭದಲ್ಲಿ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ವಿಚಾರವು ವಾದಿಯನ್ನು 8ನೇ ತರಗತಿಗೆ ದಾಖಲು ಮಾಡುವ ಸಂದರ್ಭದಲ್ಲಿ ತಿಳಿದಿರುತ್ತದೆ. ನನಗೆ ತಿಳಿದ ನಂತರ ನಾನು ಶಾಲೆಯವರಿಗೆ ಅರ್ಜಿ ಸಲ್ಲಿಸಿರುವುದಿಲ್ಲ, ಮೌಖಿಕವಾಗಿ ಭೇಟಿಯಾದಾಗ ನ್ಯಾಯಾಲಯದಿಂದ ಆದೇಶ ಪಡೆಯಲು ಶಾಲೆಯವರು ಹೇಳಿದರು. ಈಗ ವಾದಿಯ ಶಾಲಾ ದಾಖಲಾತಿಗಳಲ್ಲಿ ತಂದೆಯ ಹೆಸರು ನಮೂದಾಗಿರುವಂತೆ ಅದೇ ರೀತಿ ಮುಂದುವರೆದರೆ ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರದ್ದು ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಶಾಲೆಯವರಿಗೆ ವಾದಿಯ ಹಳೆಯ ಜನನ ಪ್ರಮಾಣ ಪತ್ರ ಸಲ್ಲಿಸಿದ ಕಾರಣ ಶಾಲೆಯವರು ಸದರಿ ಜನನ ಪ್ರಮಾಣ ಪತ್ರದ ಪ್ರಕಾರವೇ ನನ್ನ ಹೆಸರನ್ನು ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗ ನ್ಯಾಯಾಲಯದ ಮುಂದೆ ತಿದ್ದುಪಡಿ ಆಗಿರುವ 2025 ನೇ ಇಸವಿಯಲ್ಲಿ ಪಡೆದಿರುವ ಹೊಸ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಶಾಲಾ ದಾಖಲಾತಿಗಳಲ್ಲಿ ತಿದ್ದುಪಡಿ ಕೇಳುತ್ತಿದ್ದೇನೆ ಎಂದರೆ ಸರಿ.

ಶಾಲೆಯವರದ್ದು ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**